

ಅವತ್ತು ಏನಾಯಿತೆಂದರೆ ಟೈಮಾಯಿತೆಂದು ಅವಸರದಿಂದ ಹೊರಟಾಗ ಒಂದು ಕಡೆ ಜಿಂಕೆಗಳು ಹೆದರಿಕೆಯ ಅಲಾರಾಂ ಕಾಲ್ ಕೊಡತೊಡಗಿದವು. ಜಿಂಕೆಗಳು ಮುಖ ಮಾಡಿ ಕಿರುಚುತ್ತಿದ್ದ ಸದ್ದಿನ ಕಡೆಯ ಪೊದೆಯಿಂದ ಹುಲಿ ಬರಬಹುದೆಂದು ಕೊನೆಯ ಕ್ಷಣಗಳ ತನಕ ಕಾದಿದ್ದೂ ವ್ಯರ್ಥವಾಗಿತ್ತು. ಜೀಪು ಮುಂದೆ ಓಡತೊಡಗಿತು. 'ಇವತ್ತಿನ ದಿನವೂ ಗೋವಿಂದ... ಗೋವಿಂದ... ಆಯಿತಲ್ಲ ಸರ್' ಎಂದು ತಂಡದವರೆಲ್ಲಾ ಬೇಸರದಿಂದ ರಾಗ ಎಳೆಯುತ್ತಿದ್ದರು. ಅಷ್ಟರಲ್ಲಿ ಹಿಂದೆ ಕೂತಿದ್ದ ಹುಡುಗನೊಬ್ಬ, 'ಹುಲಿ ಹುಲಿ' ಎಂದು ಕೂಗಿದ. ಡ್ರೈವರ್ ಅಶೋಕಣ್ಣ ಬ್ರೇಕ್ ಜಬ್ಬಿ ಗಾಡಿ ನಿಲ್ಲಿಸಿ, 'ಎಲ್ಲಿ... ಎಲ್ಲಿ?' ಎಂದಾಗ ಆ ಹುಡುಗ, 'ಹಿಂದೆ... ಹಿಂದೆ... ಅಲ್ಲಿ ಅಲ್ಲಿ... ಅಲ್ಲಿ...' ಎಂದು ಆತಂಕದಲ್ಲಿ ಕೈದೋರಿದ.

ಹುಡುಗ ಮೊದಲು ಕೂಗಿಕೊಂಡ ಸ್ಥಳಕ್ಕೆ ಹೋಗಲು ಜೀಪನ್ನು ಹಿಮ್ಮುಖವಾಗಿ ತೆಗೆದುಕೊಂಡು ಹೋಗಬೇಕಿತ್ತು. ಇಂತಹ ಸಮಯದಲ್ಲಿ ಸಫಾರಿ ಡ್ರೈವರ್‌ಗಳು ಮಿಂಚಿನಂತೆ ಜೀಪು ಓಡಿಸುತ್ತಾರೆ. ಕೊಂಚವೂ ತಡಮಾಡದೆ ಅಶೋಕಣ್ಣ ಭರ್ರೆಂದು ಹಿಂದಕ್ಕೆ ಹೊರಟುಬಿಟ್ಟ. ಅಲ್ಲಿ ನಮಗೆ ಬೆಳೆದ ಪೊದೆಗಳು ಅಡ್ಡಲಾಗಿದ್ದವು. ಹುಲಿ ಎಲ್ಲಿದೆ ಎಂದು ನಿಖರವಾಗಿ ಹುಡುಕುವುದು ಕೊಂಚ ಕಷ್ಟವೂ ಆಗಿತ್ತು. ಒಂದು ಸಂದಿಯಿಂದ ಕಣ್ಣು ಕೀಲಿಸಿ ನೋಡಿದರೆ ಹಿನ್ನೀರಿನ ಹಸಿರು ಹುಲ್ಲಿನ ಮೇಲೆ ಅದು ಬಿದ್ದು ಉರುಳಾಡುತ್ತಿತ್ತು.

ಇದೇ ಮೊದಲ ಸಲ ನಾನವಳನ್ನು ನೋಡಿದ್ದು.